**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 7/2015**

**ದೋ.ಸಾ. : 6 ಫ್ರಾ.ಸಾ. : 5**

| | |
|---|---|
| ಸಾಕ್ಷಿಯ ಹೆಸರು | : ಸದಾನಂದ |
| ತಂದೆಯ ಹೆಸರು | : ನೋನಾ ನಾಯ್ಕ |
| ವಯಸ್ಸು | : 67 ವರ್ಷ |
| ಉದ್ಯೋಗ | : ನಿವೃತ್ತ ಆರಕ್ಷಕ ಮುಖ್ಯ ಪೇದೆ , ಕರ್ನಾಟಕ ಲೋಕಾಯುಕ್ತ |
| ವಾಸ | : ಅಂಕೋಲಾ |

**ದಿನಾಂಕಃ 22-09-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ</u>**

1. ನಾನು 2013 ರಿಂದ 2016 ಜೂನ್ ತಿಂಗಳಲ್ಲಿ ನಾನು ನಿವೃತ್ತಿಯಾಗುವವರೆಗೆ ಕರ್ನಾಟಕ ಲೋಕಾಯುಕ್ತ ಕಾರವಾರ ಕಚೇರಿಯಲ್ಲಿ ಆರಕ್ಷಕ ಮುಖ್ಯ ಪೇದೆಯಾಗಿ ಕಾರ್ಯ ನಿರ್ವಹಿಸಿರುತ್ತೇನೆ. ನಾನು ನಮ್ಮ ಠಾಣೆಯ ಗುನ್ಹಾ ಸಂ. 5/2013 ರಲ್ಲಿ ದಿನಾಂಕ 16.09.2013 ರಂದು ಜಪ್ತು ಆಗಿದ್ದ ವಸ್ತು ಸಂ. 1 ರಿಂದ 9(ಎ) ಅನ್ನು ಅದೇ ದಿನ ಧಾರವಾಡದ ರಾಸಾಯನಿಕ ಪರೀಕ್ಷಾ ಪ್ರಯೋಗಾಲಯಕ್ಕೆ ತೆಗೆದುಕೊಂಡು ಹೋಗಿ ಕೊಟ್ಟಿರುತ್ತೇನೆ. ನಾನು ಆ ವಸ್ತುಗಳನ್ನು ಅಲ್ಲಿ ಕೊಟ್ಟು ಅವರು ಕೊಟ್ಟ ಸ್ವೀಕೃತಿಯನ್ನು ತಂದು ತನಿಖಾಧಿಕಾರಿಯಾದ ಆರಕ್ಷಕ ಉಪಾಧೀಕ್ಷಕರ ಮುಂದೆ ನೀಡಿರುತ್ತೇನೆ. ದಿನಾಂಕ 23.12.2013 ರಂದು ತನಿಖಾಧಿಕಾರಿ ನನ್ನನ್ನು ಧಾರವಾಡದ ರಾಸಾಯನಿಕ ಪರೀಕ್ಷಾ ಕೇಂದ್ರಕ್ಕೆ ಹೋಗಿ ಅಲ್ಲಿಂದ ಮೇಲ್ಕಂಡ ವಸ್ತುಗಳ ಪರೀಕ್ಷೆ ಬಗ್ಗೆ ಪ್ರಮಾಣ ಪತ್ರವನ್ನು ಮತ್ತು ಆ ವಸ್ತುಗಳನ್ನು ವಾಪಸ್ಸು ತರುವಂತೆ ಕಳುಹಿಸಿದರು . ನಾನು ಅದೇ ದಿನ ಹೋಗಿ ಸದರಿ ವಸ್ತುಗಳು ಮತ್ತು ಪ್ರಮಾಣ ಪತ್ರವನ್ನು ಅಲ್ಲಿಂದ ಪಡೆದು ತಂದು ತನಿಖಾಧಿಕಾರಿ ಮುಂದೆ ಹಾಜರುಪಡಿಸಿದೆ . ನಾನು ಆ ವಸ್ತುಗಳನ್ನು ತೆಗೆದುಕೊಂಡು ಹೋದಾಗ ಅವುಗಳಿಗೆ ಹಾಕಿದ್ದ ಮೊಹರು ಸುಸ್ಥಿತಿಯಲ್ಲಿ ಇತ್ತು . ಅದೇ ರೀತಿ ಅವುಗಳನ್ನು ವಾಪಸ್ಸು ತಂದಾಗ ರಾಸಾಯನಿಕ ಪರೀಕ್ಷಾ ಕೇಂದ್ರದವರು ಹಾಕಿದ್ದ ಮೊಹರು ಸುಸ್ಥಿತಿಯಲ್ಲಿ ಇತ್ತು . ಈಗ ನೋಡಿದ ಮು.ಮಾ. 2 ರಿಂದ 10 ನಾನು ಧಾರವಾಡದ ರಾಸಾಯನಿಕ ಪರೀಕ್ಷಾ ಕೇಂದ್ರಕ್ಕೆ ತೆಗೆದುಕೊಂಡು ಹೋಗಿದ್ದ

ವಸ್ತುಗಳು ಮತ್ತು ಅಲ್ಲಿಂದ ವಾಪಸ್ಸು ತಂದ ವಸ್ತುಗಳು ಆಗಿವೆ . ನಾನು ಜಪ್ತು ಆಗಿದ್ದ ನಗದು ಹಣವನ್ನು ಸಹ ತೆಗೆದುಕೊಂಡು ಹೋಗಿದ್ದೆ . ಅದನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎನ್ ವಿ ಎನ್ ರವರಿಂದ**

2. ನಾನು ಮೇಲ್ಕಂಡ ವಸ್ತುಗಳನ್ನು ಠಾಣೆಯಲ್ಲಿ ಪಡೆದುಕೊಂಡಾಗ ವಹಿಯಲ್ಲಿ ರುಜು ಮಾಡಿದ್ದೇನಾ ಎಂದರೆ ವಹಿಯಲ್ಲಿ ಸಹಿ ಮಾಡಿಲ್ಲ. ಟ್ರ್ಯಾಪ್ ಪಂಚನಾಮೆ ಸಮಯದಲ್ಲಿ ಜಪ್ತು ಮಾಡಿದ ವಸ್ತುಗಳು ಅವುಗಳೇ ಆಗಿದೆಯಾ ಎಂದು ನಾನು ಖಚಿತ ಪಡಿಸಿಕೊಂಡೆನಾ ಎಂದರೆ ಹೌದು . ಹೇಗೆ ಖಚಿತ ಪಡಿಸಿಕೊಂಡೆ ಎಂದರೆ ಸದರಿ ಪಂಚನಾಮೆ ಆದಾಗ ನಾನು ಹಾಜರು ಇದ್ದೆ. ನಾನು ಪಂಚನಾಮೆಗೆ ಸಹಿ ಮಾಡಿರುವುದಿಲ್ಲ. ತನಿಖಾಧಿಕಾರಿಯವರಾದ ಆರಕ್ಷಕ ಉಪಾಧೀಕ್ಷಕರು ಆ ವಸ್ತುಗಳು ಜಪ್ತು ಆದ ಮೇಲೆ ಅವುಗಳನ್ನು ಅವರ ಕಚೇರಿಯ ಕಪಾಟಿನಲ್ಲಿ ಇಟ್ಟಿದ್ದರು . ಅವು ಎಲ್ಲಿ ಇಟ್ಟಿದ್ದರು ಎಂಬ ಬಗ್ಗೆ ವಹಿಯಲ್ಲಿ ನಮೂದನೆ ಮಾಡಿದ್ದದ್ದನ್ನು ನಾನು ನೋಡಿರುವುದಿಲ್ಲ. ನಾನು ರಾಸಾಯನಿಕ ಪರೀಕ್ಷಾ ಕೇಂದ್ರಕ್ಕೆ ತೆಗೆದುಕೊಂಡು ಹೋಗಿದ್ದ ವಸ್ತುಗಳು ಈ ಪ್ರಕರಣಕ್ಕೆ ಸಂಬಂಧಪಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಹಿರಿಯ ಅಧಿಕಾರಿಗಳ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ – ಇಲ್ಲ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ